**ಎಫ್ ಡಿ ಪಿ ನಂ. 9/2025**
**ಆರ್ ಡಬ್ಲ್ಯೂ ಃ 01**

**ದಿಃ 09-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ ಎಂ ಸಿ ವಕೀಲರಿಂದಃ**

ನಿಂಗಪ್ಪನ ಹಿಸ್ಸೆ ಪಾಲನ್ನು ಕೇಳಿ ನಾನು ಬಂದಿದ್ದೇನೆ. ಅರ್ಜಿದಾರರು ಸಲ್ಲಿಸಿದ ದಾವೆ ಚಾಲ್ತಿಯಲಿಲರುವಾಗ ನಿಂಗಪ್ಪ ಜೀವಂತ ಇದ್ದ ಅಂದರೆ ನಿಜ. ನಿಂಗಪ್ಪ ಸ್ವತಃ ನ್ಯಾಯಾಲಯಕ್ಕೆ ವಕೀಲರ ಮೂಲಕ ಹಾಜರಾಗಿದ್ದ ಎನ್ನುವದು ನನಗೆ ಗೊತ್ತಿಲ್ಲ. ನಿಂಗಪ್ಪ ವಿಲ್ ಬರೆಸಿ ತೀರಿಕೊಂಡಿದ್ದಾನೆ. ವಿಲ್ ಬರೆಸಿ ಇಟ್ಟಿರುವ ವಿಷಯ ನನಗೆ ಮೊನ್ನೆ ಮೊನ್ನೆ ಗೊತ್ತಾಗಿರುತ್ತದೆ.

ನಿಂಗಪ್ಪ ವಿಲ್ ಬೆರಸಿ ಇಟ್ಟಿರುವ ಬಗ್ಗೆ ನ್ಯಾಯಾಲಯದಲ್ಲಿ ತಿಳಿಸಿರಲ್ಲಿ ಆದರೆ ಬರೆಸಿ ಇಟ್ಟಿದ್ದ. ನಿಂಗಪ್ಪ ವಿಲ್ ಬರೆಸಿ ಇಟ್ಟಿದ್ದರೆ ಈ ಬಗ್ಗೆ ನ್ಯಾಯಾಲಯಕ್ಕೆ ಹೇಳಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಆದರೆ ವಿಲ್ ಬರೆಸಿ ಇಟ್ಟಿದ್ದಾನೆ ಎನ್ನುವದು ನನಗೆ ಗೊತ್ತಿದೆ. ನಿಂಗಪ್ಪ ನನ್ನ ಹೆಸರಿನಲ್ಲಿ ವಿಲ್ ಬರೆಸಿಕೊಟ್ಟಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ, ನಾನು ವಿಲ್ ನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ.

ನಿಂಗಪ್ಪನಿಗೆ 3 ಜನ ಸಹೋದರರು ಇರಬಹುದು. ಎರಡು ಜನ ಸಹೋದರಿಯರು. ನಿಂಗಪ್ಪನ ಕುಟುಂಬದಲ್ಲಿ ಪಾಲು ಆಗಿರುವುದಿಲ್ಲ ಆದ್ದರಿಂದ ವಿಲ್ ಬರೆದು ಇಡುವ ಪ್ರಮೇಯ ಬರುವುದಿಲ್ಲ ಅಂದರೆ ಸರಿಯಲ್ಲ. ಪಿತ್ರಾರ್ಜಿತ ಕುಟುಂಬದಲ್ಲಿ ಪಾಲು ಆಗಿರುವುದಿಲ್ಲ ಹಾಗೂ ಆತನ ಪಾಲಿನ ಬಗ್ಗೆ ನಿಖರತೆ ಇರುವುದಿಲ್ಲ ಆದ್ದರಿಂದ ತನ್ನ ಹೆಸರಿನಲ್ಲಿ ವಿಲ್ ಬರೆದು ಇಟ್ಟಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಶಾಲೆ ಕಲೆತಿಲ್ಲ. ವಿಲ್ ಬಗ್ಗೆ ನಾನು ಕೇಳಿ ತಿಳಿದುಕೊಂಡಿದ್ದೇನೆ. ವಿಲ್ ಬರೆಯುವ ಸಮಯದಲ್ಲಿ ಯಾರು ಯಾರು ಇದ್ದರು ನನಗೆ ಗೊತ್ತಿಲ್ಲ. 4 ವರ್ಷಗಳ ಹಿಂದೆ ವಿಲ್ ಬರೆದು ಇಟ್ಟಿದ್ದ, ದಿನಾಂಕ ಗೊತ್ತಿಲ್ಲ. ನಿಂಗಪ್ಪ ಇವರು ತನ್ನ ಹೆಸರಿಗೂ ಕೂಡಾ ವಿಲ್ ಬರೆದುಕೊಟ್ಟಿದ್ದಾರೆಂದು 12 ನೇ ಎದುರುದಾರರು ಅರ್ಜಿ ಹಾಕಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. 12 ನೇ ಎದುರುದಾರ ನಿಂಗಪ್ಪನ ಖಾಸ ಮೊಮ್ಮಗ ಎನ್ನುವದು ನನಗೆ ಗೊತ್ತಿಲ್ಲ. ನಮ್ಮ ಜಾತಿ ಮತ್ತು ನಿಂಗಪ್ಪನ ಜಾತಿ ಬೇರೆ ಬೇರೆ. ನಿಂಗಪ್ಪ ಬೇರೆ ಜಾತಿನವನಾಗಿದ್ದರೂ ಕೂಡಾ ನನ್ನ ಹೆಸರಿಗೆ ವಿಲ್ ಬರೆದುಕೊಟ್ಟಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಂಗಪ್ಪ ಅರೆ ಬಸವನಹಳ್ಳಿ ಗ್ರಾಮದವನು. ನಾನು ಬಿ ಶಿಗಿಗಟ್ಟಿ ಗ್ರಾಮದವಳು. ನನ್ನ ಹಾಗೂ ನಿಂಗಪ್ಪನ ಮಧ್ಯ ಯಾವುದೆ ಪರಿಚಯ ಹಾಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಜಮೀನುಗಳಲ್ಲಿ ಸರಸ ನಿರಸ ವಾಟ್ನಿ ಆಗಿರುವುದಿಲ್ಲ. ಆದ್ದರಿಂದ ನನ್ನ ಹೆಸರಿಗೆ ನಿಂಗಪ್ಪ ವಿಲ್ ಬರೆದುಕೊಟ್ಟಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಕಾನೂನು ಬದ್ಧವಾಗಿ ನಿಂಗಪ್ಪನ ಆಸ್ತಿ ಪಡೆದುಕೊಳ್ಳಲು ಹಕ್ಕುದಾರಳು ಅಲ್ಲ ಅಂದರೆ ಸರಿಯಲ್ಲ. ನಾನು ನಿಂಗಪ್ಪನ ಜೀವಿತ ಕಾಲದಲ್ಲಿ ಆತನನ್ನು ನೋಡಿಕೊಂಡಿದ್ದೇನೆ ಹಾಗೂ ಆತನಿಗೆ ಊಟ ಉಪಚಾರ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಂಗಪ್ಪನಿಗೆ ಮಕ್ಕಳು, ಮೊಮ್ಮಕಳು ಹಾಗೂ ಸಾಕಷ್ಟು ಸಂಬಂಧಿಕರು ಇದ್ದರು ಅಂದರೆ ನಿಜ. ನಿಂಗಪ್ಪನಿಗೆ ಸಾಕಷ್ಟು ಜನ ಮಕ್ಕಳು ಮೊಮ್ಮಕ್ಕಳು, ಸಂಬಂಧಿಕರು ಇದ್ದು ನನ್ನ ಹೆಸರಿಗೆ ವಿಲ್ ಬರೆದುಕೊಟ್ಟಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸಾಕ್ಷಿ ಅವರು ಆತನ ಮುಖವನ್ನೇ ನೋಡಿಲ್ಲ ಅನ್ನುತ್ತಾರೆ. ನಿಂಗಪ್ಪ ತನ್ನ ಜೀವಿತದ ಕೊನೆಯ ಕಾಲದಲ್ಲಿ ಅರ್ಜಿದಾರರ ಜೊತೆಗೆ ವಾಸವಾಗಿದ್ದು ಅವರೆ ಆತನ ಸಂರಕ್ಷಣ ಮಾಡಿದ್ದಾರೆ ಅಂದರೆ ಸರಿಯಲ್ಲ. ನಿಂಗಪ್ಪ ನನ್ನ ಹೆಸರಿಗೆ ವಿಲ್ ಬರೆಸಿದ್ದಾದರೆ ಆ ವಿಷಯವನ್ನು ನಾಯಾಲಯದ ಗಮನಕ್ಕೆ ತರುತ್ತಿದ್ದ ಅಂದರೆ ಸರಿಯಲ್ಲ. ನಿಂಗಪ್ಪ ತನ್ನ ಮೊಮ್ಮಗನ ಹೆಸರಿಗೆ

**ಎಫ್ ಡಿ ಪಿ ನಂ. 9/2025**
**ಆರ್ ಡಬ್ಲ್ಯು ಃ 01**

ವಿಲ್ ಬರೆದುಕೊಟ್ಟಿದ್ದಾನೆಂದು ಅರ್ಜಿದಾರರಿಗೆ ಹೇಳಿದ್ದಾನೆ ಅಂದರೆ ಸರಿಯಲ್ಲ. ನಾನು ನಿಂಗಪ್ಪನ ಕುಟುಂಬಕ್ಕೆ ಯಾವುದೆ ರೀತಿ ಸಂಬಂಧ ಇಲ್ಲ ಆದ್ದರಿಂದ ನನ್ನ ಹೆಸರಿಗೆ ವಿಲ್ ಬರೆದುಕೊಟ್ಟಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.